ರಿಕ್ರೂಟ್‌ಮೆಂಟ್ ಇಲ್ಲದ ಕಾರಣ ಕಾನ್ಸ್‌ಟೇಬಲ್‌ಗಳು ಸಬ್‌ಇನ್ಸ್‌ಪೆಕ್ಟರ್ ಆಗಿ ಬಂದಂತಹವರಿಗೆ ಅಷ್ಟೊಂದು ಮಾರಲ್ ಕರೇಜ್ ಇರುವುದಿಲ್ಲ. ದಯವಿಟ್ಟು, ಈ ಡೈರೆಕ್ಟ್ ರಿಕ್ರೂಟ್‌ಮೆಂಟ್ ಯಾವಾಗ ಮಾಡುತ್ತೀರಿ? ಮತ್ತು ಅದಕ್ಕೆ ಏನಾದರೂ ಸ್ಪೆಷಲ್ ಡ್ರೈವ್ ತೆಗೆದುಕೊಂಡು ಇದನ್ನು ಮಾಡುತ್ತೀರಾ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಸಿಬ್ಬಂದಿ ವರ್ಗದವರ ಕೊರತೆ ಬಗ್ಗೆ ಮಾನ್ಯ ಖಿರ್ಗಿಯವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಸುಮಾರು 4-5 ಸಾವಿರ ಜನ ಕಾನ್ಸ್‌ಟೇಬಲ್‌ಗಳನ್ನು, ಮಹಿಳಾ ಕಾನ್ಸ್‌ಟೇಬಲ್‌ಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಈ ವರ್ಷ ಅರ್ಥ ಸಚಿವರು, ಹಾಗೂ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಗೆ ಕೊಟ್ಟಿದ್ದಾರೆ. ಧರ್ಮವೀರ ಸಮಿತಿ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ತಾವು ಪ್ರತ್ಯೇಕವಾಗಿ ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ಆ ವಿಷಯದ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಲಿ. ಅದರಲ್ಲಿ ಯಾವುದನ್ನು ಮಾಡಬಹುದು, ಯಾವುದನ್ನು ಮಾಡುವುದಕ್ಕೆ ಹಣ ಬೇಕಾಗುತ್ತದೆ, ನಮ್ಮ ರಾಜ್ಯದ ಪರಿಸ್ಥಿತಿಯಲ್ಲಿ ಏನೇನು ಅಳವಡಿಸಿಕೊಳ್ಳಬಹುದು ಎಂದು ಒಂದು ಪ್ರತ್ಯೇಕವಾದ ಪ್ರಶ್ನೆಗೆ ನಾನು ಉತ್ತರ ಕೊಡುತ್ತೇನೆ. ಹಾಗು ಪೊಲೀಸ್ ಠಾಣೆಗಳನ್ನು ಪ್ರಾರಂಭ ಮಾಡತಕ್ಕಂಥ ಸಂದರ್ಭದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಎಂದರೆ ಎಲ್ಲಿ ಮರ್ಡರ್ಸ್, ಕ್ರೈಮ್ಸ್, ಅತ್ಯಾಚಾರಗಳು ಅಥವಾ ದುರ್ಬಲ ವರ್ಗದವರ ಮೇಲೆ ಅನ್ಯಾಯಗಳು ಹಾಗೂ ಸೆನ್ಸಿಟೀವ್ ಏರಿಯಾ ಎಲ್ಲಿ ಇವೆ, ಅದರ ಆಧಾರದ ಮೇಲೆ ನಾವು ಪೊಲೀಸ್ ಠಾಣೆಗಳನ್ನು ಮಂಜೂರಾತಿ ಮಾಡುತ್ತೇವೆ ವಿನಹ ಬೇರೆ ಯಾವ ಆಧಾರದ ಮೇಲೂ ಸಹ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವುದಕ್ಕೆ ಹೋಗುವುದಿಲ್ಲ. ತಮಗೆ ಗೊತ್ತಿದೆ ಕೆಲವು ತಾಲ್ಲೂಕುಗಳಲ್ಲಿ ಹಲವಾರು ವರ್ಷಗಳಿಂದ ಬಹಳ ಮರ್ಡರ್ ಆಗುತ್ತಿವೆ. ಅಂತಹ ಕಡೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಇನ್ನು ಪಿ.ಎಸ್.ಐ. ರಿಕ್ರೂರ್ಟ್‌ಮೆಂಟ್ ಬಗ್ಗೆ ಹೇಳಿದ್ದಾರೆ ಈಗ ನಿಜವಾಗಿಯೂ ಡೈರೆಕ್ಟ್ ರಿಕ್ರೂಟ್‌ಮೆಂಟ್ ಇಲ್ಲದೆ ಇರುವುದರಿಂದ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳ ತೊಂದರೆ ಇದೆ. ಸುಮಾರು 400-500 ಜನರ ಡೈರೆಕ್ಟ್ ರಿಕ್ರೂಟೀಸ್ ಪಿ.ಎಸ್.ಐ ರಿಕ್ರೂಟ್‌ಮೆಂಟ್ ಹಲವಾರು ವರ್ಷಗಳಿಂದ ಆಗಿಲ್ಲ. ನೀವು ಗೃಹಮಂತ್ರಿಗಳಾಗಿದ್ದಾಗ ಒಂದು ಸಾರಿ 135 ಜನರನ್ನು ರಿಕ್ರೂಟ್ ಮಾಡಿದ್ದೀರಿ. ಇದಾದ ಮೇಲೆ ಸುಪ್ರೀಂ ಕೋರ್ಟ್‌ನಲ್ಲಿ ಆರ್ಡರ್ ಆಗಿದೆ. ಆ ಆರ್ಡರ್ ಪ್ರಕಾರವಾಗಿ ಅದೇ ಲಿಸ್ಟ್‌ನಿಂದ ಇನ್ನು 40-50 ಜನರನ್ನು ಸೆಲೆಕ್ಟ್ ಮಾಡಬೇಕಾಗಿದೆ. ರೋಸ್ಟರ್ ಸಿಸ್ಟಂ ಪ್ರಕಾರವಾಗಿ ಸುಪ್ರೀಂಕೋರ್ಟ್‌ನ ಆರ್ಡರ್ ಹಿನ್ನೆಲೆಯಲ್ಲಿ ಒಂದೆರಡು ತಿಂಗಳಲ್ಲಿ ಅದೇ ಲಿಸ್ಟ್‌ನಲ್ಲಿ ಇನ್ನು 40 ಜನರಿಗೆ ರಿಕ್ರೂಟ್ ಮಾಡುತ್ತಿದ್ದೇವೆ. ಆದಲ್ಲದೆ ಈ ವರ್ಷ ಸುಮಾರು 150 ರಿಂದ 200 ಜನ ಪಿ.ಎಸ್.ಐ.ಗಳನ್ನು, 20 ಮಹಿಳಾ ಪಿ.ಎಸ್.ಐ.ಗಳನ್ನು ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡುತ್ತಿದ್ದೇವೆ.

1995-96ನೇ ಅವಧಿಯಲ್ಲಿ ಬಿಡಿಎ ಮೂಲಕ ಹಂಚಿಕೆ ಮಾಡಲು ಉದ್ದೇಶಿಸಿರುವ ನಿವೇಶನಗಳು

411 - ಶ್ರೀ ಜೆ.ಎ. ಫರ್ನಾಂಡಿಸ್ (ನಾಮ ನಿರ್ದೇಶನ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿವಿಧ ಅಳತೆಯ ವಸತಿ ನಿವೇಶನ ಹಂಚಿಕೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು?

ಆ) 1995-96ನೇ ಸಾಲಿನಲ್ಲಿ ಹಂಚಿಕೆ ಮಾಡಲು ಉದ್ದೇಶಿಸಿರುವ ನಿವೇಶನಗಳ ನಿವೇಶನಗಳ ಸಂಖ್ಯೆ ಎಷ್ಟು?

ಇ) ಆಂಗ್ಲೋ ಇಂಡಿಯನ್‌ರಿಗಾಗಿ ಸ್ವಲ್ಪ ಶೇಕಡವಾರು ನಿವೇಶನಗಳನ್ನು, ಅವರಿಂದ ಹೊಸದಾಗಿ ಅರ್ಜಿಗಳನ್ನು ಕರೆಯುವ ಮೂಲಕ ಮೀಸಲಿರಿಸಲು ಸರ್ಕಾರವು ಪರಿಗಣಿಸುವುದೇ ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ನಿವೇಶನ ಹಂಚಿಕೆಗಾಗಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಅಧಿಸೂಚನೆ	ಅಧಿಸೂಚಿಸಲಾದ ನಿವೇಶನಗಳ ಸಂಖ್ಯೆ	ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ	ಹಂಚಿಕೆ ಮಾಡಲಾದ ನಿವೇಶನ ಸಂಖ್ಯೆ	ಹಿಂದಕ್ಕೆ ಪಡೆದ ಅರ್ಜಿದಾರರ ಸಂಖ್ಯೆ	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಬಾಕಿ ಇರುವ ಅರ್ಜಿಗಳ ಸಂಖ್ಯೆ
1.	ಅಕ್ಟೋಬರ್ 1988	3,200	81,843	1,534	21,543	60,300
2.	ಡಿಸೆಂಬರ್ 1988	2,000	5,145		89	5,056
	ಒಟ್ಟು	5,200	86,988	1,534	21,632	65,356

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅರ್ಜಿದಾರರಿಗೆ ನಿವೇಶನ ಹಂಚಿಕೆ ಮಾಡುವುದು ಬಡಾವಣೆಗಳ ನಿವೇಶನಗಳ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡ ಜಮೀನಿನ ದೊರೆಯುವಿಕೆಯ ಮೇಲೆ ಅವಲಂಬಿಸಿದೆ. ಭೂ ಸ್ವಾಧೀನ ಮಾಡಿಕೊಂಡ ಜಮೀನಿನ ಮೇಲೆ ದೊಡ್ಡ ಪ್ರಮಾಣದ ಒತ್ತುವರಿ ಹಾಗೂ ಬಾಕಿ ಇರುವ ನ್ಯಾಯಾಲಯದ ತಕರಾರುಗಳ ಕಾರಣದಿಂದ ಕಾಲಕಳೆದಂತೆ ಭೂಸ್ವಾಧೀನ ಪಡಿಸಿಕೊಳ್ಳುವುದು ಅತಿ ಕಷ್ಟಕರವಾಗಿದೆ. ಜಮೀನಿನ ದೊರೆಯುವಿಕೆಯ ಕುಸಿತದ ಕಾರಣದಿಂದ ಸರ್ಕಾರವು ತನ್ನ ಹೊಸ ವಸತಿ ನೀತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಇಲ್ಲವೇ ಖಾಸಗಿಯವರಿಂದ ಸಾಮೂಹಿಕ ವಸತಿ ಯೋಜನೆ ಕೈಗೊಳ್ಳಲು ಅವಕಾಶ ಕಲ್ಪಿಸುವಿಕೆಗೆ ಹೆಚ್ಚಿನ ಒತ್ತು ಕೊಟ್ಟಿದೆ. ಈಗಿನ ಅಂದಾಜಿನಂತೆ ಲಭ್ಯವಿರುವ ಭೂಸ್ವಾಧೀನ ಪಡಿಸಿಕೊಂಡ ಜಮೀನಿನಲ್ಲಿ 1995-96ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 550 ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದೆ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಿವೇಶನಗಳ ಹಂಚಿಕೆ) ನಿಯಮಾವಳಿಗಳು 1984ರ ನಿಯಮ 11 ರಂತೆ ವಿವಿಧ ವರ್ಗದವರಿಗೆ ಈ ಕೆಳಕಂಡಂತೆ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

	ಪ್ರವರ್ಗ	ಶೇಕಡವಾರು ಮೀಸಲಾತಿ
ಅ)	ಹಿಂದುಳಿದ ವರ್ಗಗಳು	2
ಆ)	ಪರಿಶಿಷ್ಟ ಪಂಗಡಗಳಿಗೆ	3
ಇ)	ಪರಿಶಿಷ್ಟ ಜಾತಿಗೆ	13
ಈ)	ಕೇಂದ್ರ ಸಶಸ್ತ್ರ ಪಡೆಯ ಸೈನಿಕರಿಗೆ, ಮಾಜಿ ಯೋಧರು ಮತ್ತು ದಿವಂಗತ ಸೈನಿಕರ ಕುಟುಂಬದ ಸದಸ್ಯರು	5
ಉ)	ಸರ್ಕಾರಿ ನೌಕರರು	10

ಊ)	ಕೇಂದ್ರ ಸರ್ಕಾರಿ ನೌಕರರು ಮತ್ತು ಸ್ವಾಮ್ಯತೆಗೊಳಪಟ್ಟಿರುವ ಸಾರ್ವಜನಿಕ ಉದ್ದಿಮೆಗಳು ಮತ್ತು ಕೇಂದ್ರ ಅಥವಾ ರಾಜ್ಯ ಸರ್ಕಾರದ ಆಧೀನ ಅಥವಾ ಮೇಲ್ವಿಚಾರಣೆಯಲ್ಲಿನ ಸಂಸ್ಥೆಗಳು	8
ಋ)	ಅಂಗವಿಕಲರು	2
ೠ)	ಸಾರ್ವಜನಿಕರಿಗೆ	52
ಎ)	ಪ್ರಾಧಿಕಾರದ ವಿವೇಚನಾ ಪ್ರವರ್ಗದಡಿಯಲ್ಲಿ ಅಂದರೆ ಕಲೆ, ವಿಜ್ಞಾನ ಅಥವಾ ಕ್ರೀಡೆಗಳಲ್ಲಿ ಅಥವಾ ಇನ್ನಾವುದೇ ರಂಗಗಳಲ್ಲಿ ಸಾಧನೆಗೈದಿರುವ ವ್ಯಕ್ತಿಗಳಿಗೆ	5

ಆಂಗ್ಲೋ ಇಂಡಿಯನ್ ಸಮುದಾಯದ ಸದಸ್ಯರಿಗಾಗಿ ಯಾವುದೇ ನಿರ್ದಿಷ್ಟ ಮೀಸಲಾತಿ ಇರುವುದಿಲ್ಲ. ಆದಾಗ್ಯೂ ಈ ಸಮುದಾಯದ ಸದಸ್ಯರು ಮೇಲಿನ ಯಾವುದೇ ವರ್ಗಕ್ಕೆ ಸೇರಿದವರಾಗಿದ್ದಲ್ಲಿ ಸೌಲಭ್ಯವನ್ನು ಪಡೆಯಬಹುದಾಗಿದೆ.

SRI J.A. FERNANDEZ : Mr. Speaker Sir, our community over the last forty five years has made a tremendous contribution in the filed of Posts and Telegraphs, Railways, Armed Serivces etc., I appeal to the Hon'ble Chief Minister through the Hon'ble Speaker to provide us a colony, so that we can bring up the less fortunate members of the community. According to the reply made by the Government, 62% lives in slums. We require some help from the Government to pull us up for the services we have rendered over the years.

ಶ್ರೀ ಹೆಚ್.ಡಿ. ದೇವೇಗೌಡ : ಈಗಾಗಲೇ ಬಿ.ಡಿ.ಎ.ನಲ್ಲಿ ಯಾವ ಯಾವ ಕೆಟಾಗರಿಗಳಿಗೆ ಸೈಟುಗಳನ್ನು ಕೊಡಬೇಕು ಎನ್ನುವ ಬಗ್ಗೆ ಒಂದು ನಿಯಮ ಇದೆ. ಈಗ ಅವರು ಏನು ಹೇಳುತ್ತಿದ್ದಾರೋ, ಆ ಕೆಟಾಗರಿಗಳನ್ನು ಸೇರಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ನೋಡುತ್ತೇನೆ.

SRI J.A. FERNANDEZ : Can I have the answer in English?

MR. SPEAKER : Please meet me in my office, I will explain. I will stand by you to seek redressal for your problem. I am with you to get solution for this problem. I am with you to get solution for this problem. Please come on a meet me in my office.

ಗಡಿ ಪ್ರದೇಶಗಳಿಂದ ನೆರೆ ರಾಜ್ಯಗಳಿಗೆ ಸಾರಾಯಿಯ ಕಳ್ಳ ಸಾಗಾಣಿಕೆ

232 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಗಡಿ ಪ್ರದೇಶಗಳಿಂದ ನೆರೆ ರಾಜ್ಯವಾದ ಆಂಧ್ರಕ್ಕೆ ಕಳ್ಳತನದಿಂದ 'ಅರ್ಯಾಕ್' ಹೇರಳವಾಗಿ ಹರಿದು ಹೋಗುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?